# ಯಾರು ನಮ್ಮ ಆದರ್ಶ?

ಸ್ವಾಮಿ ಸುನಿರ್ಮಲಾನಂದ

ಆಧುನಿಕತೆಯ ಹುಚ್ಚು ಹಳೆಯದನ್ನೆಲ್ಲ ತುಚ್ಛವಾಗಿ ಕಾಣುವಂತೆ ಮಾಡಿದೆ. ಆದರೆ ಹಳೆಯದನ್ನು ಹೊಸ ಬೆಳಕಿನಿಂದ ನೋಡಿ ಅದಕ್ಕೆ ಹೊಸತನವನ್ನು ನೀಡಿದರೆ ಇಂದಿನ ಯುವಕರು ಅದನ್ನು ಸ್ವೀಕರಿಸಬಹುದು. ಈ ಲೇಖನದಲ್ಲಿ ಆ ಪ್ರಯತ್ನ ನಡೆದಿದೆ. ಸ್ವಾಮಿ ಸುನಿರ್ಮಲಾನಂದರು ಆಂಗ್ಲ ಮಾಸಿಕ 'ಪ್ರಬುದ್ಧ ಭಾರತ'ದ ಸಂಪಾದಕರು.

## ಬಾಗಿಲೊಡೆಯುವ ಹೀರೋ

ನಮ್ಮ ಯುವಜನರನೇಕರು ಗೊಂದಲ ಸ್ಥಿತಿಯಲ್ಲಿದ್ದಾರೆ. ಏನು ಮಾಡಬೇಕೆಂಬುದೇ ತಿಳಿಯದಂತಾಗಿದೆ ಅವರಿಗೆ. ಜೀವನದಲ್ಲಿ ಮುನ್ನಡೆಯಲು ಆದರ್ಶಗಳು ಬೇಕು. ಇಂದಿನ ಕಾಲದ ಆದರ್ಶಗಳ ಹಿಂದೆ ಹೋಗೋಣ ಎಂದರೆ ಈ ಆಧುನಿಕ ಆದರ್ಶಗಳು ಮಿಂಚಿನಷ್ಟೇ ಕ್ಷಣಿಕ. ಇಂದು ಒಬ್ಬ ಸಿನೆಮಾ ನಟ ವಿಖ್ಯಾತನಾಗುತ್ತಾನೆ. ಅವನ ನಡೆ, ನುಡಿ, ವಸ್ತ್ರ, ಕೇಶವಿನ್ಯಾಸ, ಸೇದುವ ಸಿಗರೇಟು—ಎಲ್ಲವನ್ನೂ ಯುವಕರು ಅನುಸರಿಸುತ್ತಾರೆ. ಅವನಂತೆಯೇ ಜೀವನ ನಡೆಸುವ ಆಸೆಗೆ ಹಠಾತ್ತಾಗಿ ಎರಡೇ ದಿನಗಳಲ್ಲಿ ವಜ್ರಾಘಾತವಾಗುತ್ತದೆ—ಆತ ಕಳ್ಳನೋ ಸುಳ್ಳನೋ ಮತ್ತೇನೋ ಆಗಿ ಕಣ್ಮರೆಯಾಗುತ್ತಾನೆ. ರಾಜಕಾರಣಿಗಳನ್ನು ಹಿಂಬಾಲಿಸುವುದೂ ಮರೀಚಿಕೆಯನ್ನು ಹಿಂಬಾಲಿಸುವುದೂ ಒಂದೇ.

ಹಾಗಾದರೆ ಯುವಕ ಯುವತಿಯರು ಮಾಡುವುದೇನು? ಒಂದು ಪುಟ್ಟ ಹುಡುಗನನ್ನು ಯಾರೋ ಹಿರಿಯರು ಕೇಳಿದರಂತೆ: 'ನೀನು ದೊಡ್ಡವನಾದ ಮೇಲೆ ಯಾರಂತೆ ಆಗ ಬಯಸುವೆ?' ಆ ಹುಡುಗ, 'ನಾನು ಸಂಜಯನೋ ಮೃತ್ಯುಂಜಯನೋ ಆಗುತ್ತೇನೆ.' 'ಯಾಕೆ?' ಎಂದಾಗ, 'ಆಹಾ! ನೀವು ಆ ಸಿನಿಮಾ ನೋಡಿಲ್ಲವೇ? ಅದರಲ್ಲಿ ಅವನು ಹೇಗೆ ಕೈಗೆ ಕಟ್ಟಿದ್ದ ಸರಪಳಿ ಕಿತ್ತೆಸೆದು, ಕರಾಟೆ ಏಟಿನಿಂದ ಕಬ್ಬಿಣದ ಬಾಗಿಲುಗಳನ್ನು ಒಡೆದು, ಎಲ್ಲ ದುಷ್ಟರನ್ನೂ ಕೊಲ್ಲುತ್ತಾನೆ! ಅವನೇ ನನ್ನ ಹೀರೋ!' ಆ ಹಿರಿಯರು ಕೇಳಿದರಂತೆ, 'ಅದೇನೋ ಸರಿ, ಆದರೆ ಅವನನ್ನು ಸೆರೆಮನೆಯಲ್ಲಿಟ್ಟಿದ್ದಾರೆ. ಅವನೇಕೆ ಬಾಗಿಲನ್ನು ಒಡೆದು ಬರಲಿಲ್ಲ?' ಹುಡುಗನ ಉತ್ಸಾಹ ತಣ್ಣಗಾಯಿತಂತೆ. 'ಹಾಗಾದರೆ.... ಹಾಗಾದರೆ....' ಎಂದು ಅವನು ಬೆದರಿದಾಗ ಆ ಹಿರಿಯರು, 'ನೋಡಪ್ಪ, ನಿನ್ನ ಸಂಜಯ, ಮೃತ್ಯುಂಜಯ, ಧನಂಜಯರೆಲ್ಲ ಸರಿ. ಆದರೆ ಭಾರತದ ಸನಾತನ ಧರ್ಮದ ಮಹಾನ್ ಋಷಿಮುನಿಗಳನ್ನು ಅನುಸರಿಸು. ಆಗ ನಿನಗೆ ಒಳ್ಳೆಯದಾಗುತ್ತದೆ,' ಎಂದು ಹೇಳಿದರಂತೆ.

ಇದನ್ನು ಕೇಳಿದರೆ ಯುವಜನರು ಮತ್ತೂ ಚಿಂತಿತರಾಗುತ್ತಾರೆ. 'ಸನಾತನ ಧರ್ಮದ ಋಷಿಮುನಿಗಳು ನಮ್ಮ ಆದರ್ಶವೇ? ಸರಿಯಾಯಿತು! ಈ ಕಂಪ್ಯೂಟರ್ ಯುಗದಲ್ಲಿ ಅರೆಬೆತ್ತಲೆಯ, ಜಟೆ ತುಂಬಿದ ತಲೆಯ, ಉದ್ದನೆಯ ಗಡ್ಡವಿರುವ ಋಷಿಯೆ ನಮ್ಮ ಆದರ್ಶ?' ಯಾರು ತಾನೇ ಹಿಂದಿನ ಕಾಲದ ಋಷಿಮುನಿಗಳನ್ನು ಇಂದಿನ ಆದರ್ಶವೆಂದರೆ ಒಪ್ಪುವರು? ಆ ಋಷಿಮುನಿಗಳ ವೇಷವೋ, ಅವರ ಹಾವಭಾವಗಳೋ! ಆದರೆ 'ಹಿಂದಿನ ಕಾಲದ ಋಷಿಗಳನ್ನು ಅನುಸರಿಸು' ಎಂದರೆ ಅವರು ಮಾಡಿದ ಮಹತ್ಕಾರ್ಯಗಳನ್ನು ಅನುಸರಿಸು ಎಂದರ್ಥ ಎನ್ನುತ್ತಾರೆ ಹಿರಿಯರು. ಸಮಸ್ಯೆ ಮತ್ತೂ ಜಟಿಲ!

## ಯಜ್ಞ ಮಾಡುವವರು ಆದರ್ಶವೇ?

ಇಂದಿನ ಯುವಜನರಿಗೆಲ್ಲರಿಗೂ ತಿಳಿದೇ ಇದೆ, ಹಿಂದಿನ ಕಾಲದ ಋಷಿಮುನಿಗಳು ಏನು ಮಾಡುತ್ತಿದ್ದರೆಂದು. ಸಿನೆಮಾ, ಟೀವಿ ಇತ್ಯಾದಿ ಪ್ರಸಾರ ಮಾಧ್ಯಮಗಳು ತೋರಿಸುವಂತೆ ಋಷಿಮುನಿಗಳೆಂದರೆ ಯಜ್ಞ ಮಾಡುವವರು. ಕಣ್ಮುಚ್ಚಿ ಚಿಂತಿಸಿದರೇ ಮನಸ್ಸಿನೆದುರು ಚಿತ್ರ ಬಂದು ನಿಲ್ಲುತ್ತದೆ—ಬೆಂಕಿಯ ಸುತ್ತಲೂ ಹಲವರು ಕೇಶ-ದಾಡಿ ಸಂಭೂತರು ಕುಳಿತು 'ಸ್ವಾಹಾ, ಸ್ವಾಹಾ' ಎಂದೆನ್ನುತ್ತಿದ್ದಾರೆ. 'ಇವರೆಂತಹ ಆದರ್ಶ? ಅರ್ಥಾತ್, ಇಂದಿನ *IT* ಯುಗಕ್ಕೆ ಯಜ್ಞಯಾಗಾದಿಗಳು ಆದರ್ಶವೇ?' ಹೌದು, ಯಜ್ಞವೇ ಇಂದಿನ ಆದರ್ಶ. ಜಗತ್ತಿನ ಆದಿಯಿಂದ ಹಿಡಿದು ಅಂತ್ಯದವರೆಗೂ ಯಜ್ಞವೇ ಆದರ್ಶವಾಗಿ ನಿಲ್ಲುತ್ತದೆ. ಹಾಗೂ ಈ ಯಜ್ಞಮಾಡುವ ಶ್ರೇಷ್ಠ ಯಜ್ಞಕರ್ತಾರರೇ ನಮ್ಮ ಜೀವನದ ಆದರ್ಶವಾಗುತ್ತಾರೆ. ಸತ್ಯವಾಗಿ! 'ಹಾಗಾದರೆ ಇಂದಿನ ಅತ್ಯಾಧುನಿಕ ಯುಗದಲ್ಲಿ ನಾವು ಮೂರ್ಖರಾಗಬೇಕೆ? ಮೂರ್ಖರಾಗಿ ಹಳೆಯ ತಲೆಮಾರಿನವರಂತೆ ಬೆಂಕಿಯಲ್ಲಿ ಕೇಜಿಗಟ್ಟಲೆ ತುಪ್ಪ ಸುರಿಯಬೇಕೇ? ಅದ್ಭುತವಾದ ಸಲಹೆ. ವಿಶೇಷವಾಗಿ ಯುವಜನರಿಗೆ ಇದು ನಿಜವಾಗಿಯೂ ಅಸಂಬದ್ಧ ಸಲಹೆ!' ಇಲ್ಲ. ನಿಜವಾದ ಯಜ್ಞ ಎಂದರೆ ಏನು ಎಂಬುದನ್ನು ಮೊದಲು ತಿಳಿಯೋಣ.

## ಯಜ್ಞವೆಂದರೇನು?

ಯಜ್ಞ ಎಂದರೆ ಕೊಡುವುದು. ನಮ್ಮಿಂದ ಏನೆಲ್ಲ ಸಾಧ್ಯವೋ ಅದೆಲ್ಲವನ್ನೂ ಕೊಡುವುದಕ್ಕೆ ಯಜ್ಞ ಎಂದು ಹೆಸರು. ಈ ವಿಶ್ವವು ಒಂದು ಬೃಹತ್ ಯಜ್ಞಸತ್ರ. ಇಲ್ಲಿ ಅನವರತವಾಗಿ ಯಜ್ಞ ನಡೆಯುತ್ತಿದೆ. ಯಜ್ಞಚಕ್ರ ಸದಾ ಸುತ್ತುತ್ತಿದೆ. ಒಂದು ಬೀಜವನ್ನು ಬಿತ್ತಿದಿರಿ. ನೀರು ಹಾಕಿದಿರಿ. ಆಗ ಆ ಬೀಜ ಮೊಳೆತು, ಸಸಿಯಾಗಿ,

## ಇಚ್ಛೆ ಆದರ್ಶವನ್ನು ಅನುಸರಿಸಬೇಕು, ಹೃದಯ ಆದರ್ಶವನ್ನು ಪ್ರೀತಿಸಬೇಕು ಮತ್ತು ಮನಸ್ಸು ಆದರ್ಶವನ್ನು ಚಿಂತಿಸಬೇಕು.

ಗಿಡವಾಗಿ, ಮರವಾಗಿ, ಹೂವು ಹಣ್ಣುಗಳನ್ನು ನೀಡುತ್ತದೆ. ಕಾಲಕ್ರಮೇಣ ಅದು ಒಣಗಿ ಅದರ ಮರವನ್ನು ಸೌದೆಯಾಗಿ ಉಪಯೋಗಿಸುತ್ತೇವೆ. ಈ ಸೃಷ್ಟಿಯಿಂದ ನೀರು, ಬೆಳಕು, ಗಾಳಿ, ಇತ್ಯಾದಿಗಳನ್ನು ಪಡೆದುದರ ಫಲವಾಗಿ ವೃಕ್ಷವು ಹಣ್ಣು, ಹೂ, ಸೌದೆ ಇತ್ಯಾದಿಗಳನ್ನು ನೀಡುತ್ತವೆ. ಇದೇ ಯಜ್ಞ.

ಜಗತ್ತಿನ ಪ್ರತಿಯೊಂದು ಕ್ರಿಯೆಗೂ ಒಂದು ಪ್ರತಿಕ್ರಿಯೆಯುಂಟು. ಆಹರಣ-ವಿಸರ್ಜನ, ಪ್ರಾಪ್ತಿ-ದಾನ, ಆಗಮನ-ನಿರ್ಗಮನ—ಈ ಕ್ರಿಯೆಪ್ರತಿಕ್ರಿಯೆಗಳ ಚಕ್ರ ನಿರಂತರವಾಗಿ ಸುತ್ತುತ್ತಿದೆ. ಜಗತ್ತಿನಲ್ಲಿ ಏನನ್ನೇ ನೋಡಿದರೂ ಒಂದು ಚಕ್ರ ಅಥವಾ cycle ದೃಷ್ಟಿಗೋಚರವಾಗುತ್ತದೆ. ಅರ್ಧಚಕ್ರ ಎಂಬುದೇನೂ ಇಲ್ಲ—ಇದ್ದರೆ ಅದರಿಂದ ಆಪತ್ತೇ ಹೆಚ್ಚು. ಅರ್ಧಚಕ್ರದ ಒಂದು ಇತ್ತೀಚಿನ ಉದಾಹರಣೆ ಪ್ಲಾಸ್ಟಿಕ್! ಕಾರಣ ಅದನ್ನು ಮೂಲರೂಪಕ್ಕೆ ತರಲಾಗುವುದಿಲ್ಲ.

ಹಾಗಾಗಿ, ಯಜ್ಞವೆಂದರೆ ನಾವು ಜಗತ್ತಿನಿಂದ ಏನನ್ನು ಸ್ವೀಕರಿಸುತ್ತೇವೋ ಅದಕ್ಕೆ ಬದಲಾಗಿ ನಮ್ಮಿಂದ ಸಾಧ್ಯವಾದಷ್ಟನ್ನೂ ಜಗತ್ತಿಗೆ ಕೊಡುವುದು. 'ನಾವು ಬರೀ ಸ್ವೀಕರಿಸುತ್ತಾ ಹೋಗುತ್ತೇವೆ; ಏನನ್ನೂ ಹಿಂತಿರುಗಿಸುವುದಿಲ್ಲ,' ಎಂದರೆ ಆಗದು. ಪ್ರಥಮತಃ ಇದು ಅಸಂಭವ. ದ್ವಿತೀಯತಃ ಇದು ಮಹಾನ್ ಚೌರ್ಯ. ಮಳೆ ನೀರು ಬಿದ್ದು ಆಹಾರ ಸಿದ್ಧವಾಗುತ್ತದೆ. ಆಹಾರ ತಿಂದು ಮನುಷ್ಯರು ಬಲಹೊಂದುತ್ತಾರೆ. ಬಲಹೊಂದಿ ಕೆಲಸ ಮಾಡುತ್ತಾರೆ. ಕೆಲಸದಿಂದ ಲೋಕಹಿತವಾಗುತ್ತದೆ. ಈ ರೀತಿಯ ಯಜ್ಞ ಯುಗಯುಗಗಳಿಂದ ಸಾಗಿದೆ. ಕೋಟಿಕೋಟಿ ಚಿಕ್ಕ ಚಿಕ್ಕ ಯಜ್ಞಗಳು—ಕ್ರಿಮಿ, ಕೀಟ, ಹಕ್ಕಿಗಳು, ಪ್ರಾಣಿಗಳು ಮನುಷ್ಯರು ಮಾಡುತ್ತಿರುವಂತಹವು—ಒಂದಾಗಿ ಸೇರಿ ಈ ಪ್ರಪಂಚ ಯಜ್ಞ ಸಾಗಿದೆ. ಇದೇ ನೈಜ ಯಜ್ಞ. ಈ ಯಜ್ಞದಲ್ಲಿ ನಾವೆಲ್ಲರೂ ಬೇಡವೆಂದರೂ ಭಾಗಿಗಳಾಗಲೇಬೇಕು. ಹಾಗಾಗಿ, ನಾವೆಲ್ಲರೂ ಋಷಿ ಮುನಿಗಳೇ! ಈಗ ಋಷಿಮುನಿಗಳಾರೆಂದು ತಿಳಿದೀತು!

> ನಮ್ಮಲ್ಲಿರುವ ಆಲೋಚನೆಗಳು, ಮನೋಭಾವಗಳು ಮತ್ತು ಕ್ರಿಯೆಗಳು ಎಲ್ಲವೂ ಜಗತ್ತಿಗೆ ನೀಡುವುದಕ್ಕಾಗಿಯೇ ಇರುವುದು. ನಮ್ಮನ್ನು ನಾವು ಉತ್ತಮಪಡಿಸಿಕೊಂಡು ಅವು ಹೊರಗೆ ಹರಿಯುವಂತೆ ಮಾಡಬೇಕು.

### ಶ್ರೇಷ್ಠ ಯಜ್ಞ ಯಾರದು?

ಯಜ್ಞ ಎಂದರೆ ಕೊಡುವುದು ಎಂದು ನಾವು ಹಿಂದೆ ಹೇಳಿದ್ದೇವೆ. ಈ ಕೊಡುವಿಕೆಯಲ್ಲಿನ ತಾರತಮ್ಯದ ಮೇಲೆ ಯಜ್ಞದ ಶ್ರೇಷ್ಠತೆ ನಿಂತಿದೆ. ಹಸುವಿಗೆ ಹುಲ್ಲು ತಿನ್ನಿಸಿದರೆ ಹಾಲು ಕೊಡುತ್ತದೆ, ಗೊಬ್ಬರ ಕೊಡುತ್ತದೆ, ಬೆರಣಿ ಕೊಡುತ್ತದೆ. ಅದರ ಚರ್ಮ ಇತ್ಯಾದಿಗಳೂ ಮರಣಾನಂತರ ಕೆಲಸಕ್ಕೆ ಬರುತ್ತವೆ. ಹಸುವಿನಷ್ಟೇ ಎಲ್ಲಾ ಜೀವಿಗಳ ಕೊಡುಗೆಯೂ ಆಗಿದ್ದರೆ ಏನಾಗುತ್ತಿತ್ತು? ಜಗತ್ತು ಇಂದಿನಂತಿರುತ್ತಿರಲಿಲ್ಲ. ಆದರೂ ಹಸುವಿನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವಿದೆ. ಹಸುವೇ ಏಕೆ, ಎಲ್ಲ ಪ್ರಾಣಿಪಕ್ಷಿ, ಮರಗಳಿಗಿಂತಲೂ ಹಿರಿದಾದ ಯಜ್ಞಮಾಡುವ ಶಕ್ತಿ ಮನುಷ್ಯನಿಗಿದೆ. ಏಕೆಂದರೆ ಮನುಷ್ಯನ ಕೊಡುಗೆ ಅಪಾರವಾದುದು. ಏನು ಆ ಕೊಡುಗೆ?

ಮನುಷ್ಯ ಪ್ರಕೃತಿಯಿಂದ ಏನನ್ನು ಸ್ವೀಕರಿಸುವನೋ ಅದರ ಹತ್ತರಷ್ಟು ನೀಡಬಲ್ಲ. ಅಷ್ಟೇ ಏಕೆ, ಮನುಷ್ಯ ಪ್ರಕೃತಿಯನ್ನೇ ಜಯಿಸುವಂತಹ ಶಕ್ತಿಯುಳ್ಳವನು. ಈ ಪ್ರಕೃತಿ ನೀಡುವ ಗಾಳಿ, ನೀರು, ಆಹಾರ, ಬಿಸಿಲು ಇತ್ಯಾದಿಗಳನ್ನು ಪಡೆದು ಮನುಷ್ಯನೆಂಬ ಯಂತ್ರವು ಅವುಗಳನ್ನು ರಾಸಾಯನಿಕ ಕ್ರಿಯೆಗೆ ಒಳಪಡಿಸುತ್ತದೆ. ಅದರಿಂದಾಗಿ ಅವನ ಶಾರೀರಿಕ ಮತ್ತು ಮಾನಸಿಕ ಬೆಳವಣಿಗೆಯುಂಟಾಗುತ್ತದೆ. ಈ ಬೆಳವಣಿಗೆಯ ಪರಿಣಾಮವಾಗಿ ಅವನು ದೈಹಿಕ ಪರಿಶ್ರಮದೊಂದಿಗೆ ಮಾನಸಿಕ ಪರಿಶ್ರಮವನ್ನೂ ಮಾಡಲು ಯೋಗ್ಯನಾಗುತ್ತಾನೆ. ಸರ್ವಶ್ರೇಷ್ಠ ಮಾನಸಿಕ ಪರಿಶ್ರಮ ಯಾವುದು?

ಯಾವ ಪರಿಶ್ರಮ ಮಾಡಿದರೆ ನಮ್ಮ ದುಃಖ ನಾಶವಾಗುವುದೋ ಅದನ್ನು ಸಾಧಿಸುವುದು. ನಮಗೆಲ್ಲರಿಗೂ ತಿಳಿದೇ ಇರುವಂತೆ ನಾವು ಕೇವಲ ಯಜ್ಞಚಕ್ರದಲ್ಲಿ ಸುತ್ತುತ್ತಿರುವ ಯಂತ್ರಗಳಲ್ಲ—ತಿನ್ನುವುದು, ಕೆಲಸ ಮಾಡುವುದು, ಸಾಯುವುದು, ಇತ್ಯಾದಿಗಳೇ ಸರ್ವಸ್ವವಲ್ಲ. ನಾವಿಲ್ಲಿ ಬರುತ್ತಿರುವುದು ಬಂಧನದಿಂದ ಮುಕ್ತರಾಗಲೆಂದು. ಅದು ಮತ್ತೊಂದು ದೊಡ್ಡ ವಿಷಯವಾದರೂ ಸಂಕ್ಷೇಪವಾಗಿ ಹೇಳಬೇಕೆಂದರೆ, ಯುವಜನರು ಒಮ್ಮೆ ಕಾಲೇಜಿನಲ್ಲಿ ಹೆಸರು ದಾಖಲು ಮಾಡಿಸಿಕೊಂಡರೆಂದರೆ ಹೇಗೆ ನಿತ್ಯವೂ ಅಲ್ಲಿಗೆ ಹೋಗಬೇಕೋ ಹಾಗೆ ಈ ಪೃಥಿವಿಯಲ್ಲಿ ನಮ್ಮ ಅಸ್ತಿತ್ವ ಸ್ಥಾಪಿಸಿಕೊಂಡರೆ ಪಾಸ್ ಆಗುವವರೆಗೂ ಬರಬೇಕು, ಹೋಗಬೇಕು. ಬೇಗನೆ ಪಾಸು ಮಾಡಬೇಕಾದರೆ ಮಾಡಬೇಕಾದುದೇನು? ಬೇಗನೆ ಪಾಸು ಮಾಡಬೇಕಾದರೆ ಸರಿಯಾದ ಜ್ಞಾನಾರ್ಜನೆ ಮಾಡಿಕೊಳ್ಳಬೇಕು. ಪಾಸು ಮಾಡುವುದೆಂದರೇನು? ಪ್ರಕೃತಿಯನ್ನು ಗೆಲ್ಲುವುದು.

> ಆದಾನಂ ಹಿ ವಿಸರ್ಗಾಯ ಸತಾಂ ವಾರಿಮುಚಾಮಿವ।
> ಸಜ್ಜನರು ಮೋಡದಂತೆ ಬೇರೆಯವರಿಗೆ ಕೊಡುವುದಕ್ಕಾಗಿಯೇ ತೆಗೆದುಕೊಳ್ಳುತ್ತಾರೆ.

### ಜ್ಞಾನಾರ್ಜನೆಯ ಯಜ್ಞ

ನಾನಾ ರೀತಿಯ ಯಜ್ಞಗಳಿವೆ—ಎಲ್ಲವೂ ಒಂದೇ ಮೂಲ ತತ್ತ್ವದ ಮೇಲೆ ನಿಂತಿವೆ. ಆ ತತ್ತ್ವವೆಂದರೆ ಸ್ವೀಕರಿಸಿದುದಕ್ಕಿಂತ ಹೆಚ್ಚನ್ನು ನೀಡುವುದು. ದ್ರವ್ಯಯಜ್ಞ, ಧನಯಜ್ಞ ಇತ್ಯಾದಿ ಏನೇ ಹೆಸರಿದ್ದರೂ ಮಾವಿನ ಮರದಂತೆ ಸ್ವಲ್ಪ ನೀರು, ಸ್ವಲ್ಪ ಬಿಸಿಲು ಸಿಕ್ಕರೆ ಸಾಕು, ರಾಶಿ ರಾಶಿ ಹಣ್ಣು ನೀಡುವಂತೆ ನೀಡಬೇಕು, ಜಗತ್ತಿನ ಸಮೃದ್ಧಿಗೆ

ಕಾರಣರಾಗಬೇಕು.

ಈ ಜಗತ್ತಿನಲ್ಲಿ ಬಂಧನದಿಂದ ಬಿಡುಗಡೆ ಹೊಂದುವ ಯೋಗ್ಯತೆ ಮನುಷ್ಯನಿಗೆ ಮಾತ್ರವೇ ಇರುವುದು. ಹಾಗಾಗಿ ಅವನ ಯಜ್ಞವೇ ಶ್ರೇಷ್ಠ ಯಜ್ಞ. 'ನಾವು ಕಣ್ಣಿಂದ ಕಾಣುವಂತೆ ಮನುಷ್ಯ ಜಗತ್ತಿನ ಎಲ್ಲ ಸಂಪತ್ತನ್ನೂ ಧ್ವಂಸ ಮಾಡುತ್ತಾನೆ, ಆದರೆ ನೀಡುವುದು ಅತ್ಯಲ್ಪ. ಒಂದು ಹಸುವನ್ನು ನೋಡಿ—ಎಷ್ಟು ಉಪಕಾರಿ! ಗಿಡ ಮರಗಳನ್ನು ನೋಡಿ! ಆದರೆ ಮನುಷ್ಯನ ಶರೀರದಿಂದ ಲಾಭವೇನು ಜಗತ್ತಿಗೆ?' ಎಂದು ನೀವು ಕೇಳಬಹುದು. ಉಪಕಾರ ಶರೀರದಿಂದಲ್ಲ, ಮನಸ್ಸಿನಿಂದ. ನಾವು ಮನುಷ್ಯರು ಮಾಡುವ ಯಜ್ಞವೇ ಶ್ರೇಷ್ಠವೆಂದು ಹೇಳಿದುದರ ಕಾರಣವಿಷ್ಟೇ : ಉಳಿದೆಲ್ಲ ಪ್ರಾಣಿಗಳೂ ಯಜ್ಞ ಮಾಡಿದರೂ ಅವುಗಳ ಕೊಡುಗೆ ದೈಹಿಕ ; ಮನುಷ್ಯರದು ಮಾನಸಿಕ. ಈ ಮಾನಸಿಕ ಕೊಡುಗೆಯಲ್ಲಿ ವಿಜ್ಞಾನಿಗಳ ಆವಿಷ್ಕಾರ, ನಾನಾ ರೀತಿಯ ಭೋಗ ಸಾಧನೆಗಳು, ಇತ್ಯಾದಿಗಳನ್ನೂ ಗಮನಿಸಬಹುದು.

ಆದರೆ ಸರ್ವಶ್ರೇಷ್ಠ ಕೊಡುಗೆ ಜ್ಞಾನದಾನ. ಈ ಜಗತ್ತಿನಲ್ಲಿ ಕಾಲಿಟ್ಟ ಕ್ಷಣದಿಂದ ಹಿಡಿದು ಹಿಂತಿರುಗುವತನಕ ನಮ್ಮ ಜೀವನ ಕೇವಲ ದುಃಖಮಯವೇ. ಸುಖ, ಸುಖ ಎಂದು ಹಾತೊರೆದರೂ ಪಡೆಯುವುದು ದುಃಖವೇ. ಈ ದುಃಖದ ಏಟುಗಳನ್ನು ಒಂದೇ ಜನ್ಮದಲ್ಲಿ ಸಹಿಸಬೇಕು ಎಂದಲ್ಲ; ಜನ್ಮ ಜನ್ಮಾಂತರದಲ್ಲಿ ಬರುವುದು, ಕಷ್ಟ ಸಹಿಸುವುದು, ಹಿಂತಿರುಗುವುದು—ಈ ಚಕ್ರ ಸಾಗಿದೆ.

ಏಕೆ ಬರುತ್ತೇವೆ? 'ವಾಸನಾ' ಎಂಬ ಶಬ್ದವಿದೆ. ಇದೇ ನಾವು ಮತ್ತೆ ಮತ್ತೆ ಬರುವುದಕ್ಕೆ ಕಾರಣ. ಈ ಜಗತ್ತಿನ ದೈಹಿಕ ಸ್ತರದ ಯಜ್ಞ ಸಾಧನಗಳು ಎಷ್ಟೊಂದು ಪ್ರಬಲ ಎಂದರೆ, ಅವುಗಳ ಆಕರ್ಷಣೆ ಅದೆಷ್ಟು ಪ್ರಬಲ ಎಂದರೆ, ಒಂದು ಮಾವಿನ ಹಣ್ಣಿನ ಆಸೆಯಿಂದಾಗಿ ಹತ್ತು ಜನ್ಮ ಪಡೆಯಬಲ್ಲೆವು. ಇದೇ ವಾಸನಾ. ಈ ಮಾವಿನ ಹಣ್ಣು ತಿನ್ನುವುದು ಯಜ್ಞಕ್ಕೆಂದು—ತಿಂದು ಶಕ್ತಿ ಪಡೆದು ಆ ಶಕ್ತಿಯ ಸದುಪಯೋಗ ಮಾಡೋಣ ಎಂದು. ಆದರೆ ನಾವು ಹಾಗೆ ಮಾಡದೇ ಯಜ್ಞ ಸಾಧನಕ್ಕೇ ಬದ್ಧರಾಗುತ್ತೇವೆ. ಪ್ರಕೃತಿಯನ್ನು ಗೆಲ್ಲದೆ ಅದರ ದಾಸರಾಗುತ್ತೇವೆ!

ಇಲ್ಲಿಯೇ ಜ್ಞಾನಯಜ್ಞದ ಮಹತ್ವ ತಿಳಿಯುವುದು. ಯುವಜನರು ಓದುತ್ತಾರೆ—ಕೆಲಸ ಸಿಗುತ್ತದೆ ಎಂದು. ಇದೊಂದು ಕಾಮ್ಯ ಯಜ್ಞ, ಆಸೆಯಿಂದ ಕೂಡಿದ ಯಜ್ಞ. ಆದರೆ ನಮ್ಮ ದೇಶದಲ್ಲಿ ಯುಗ ಯುಗಾಂತರಗಳಿಂದ ಕೆಲಜನರು ಓದುತ್ತಾ ಬಂದಿದ್ದಾರೆ, ಓದಿ ಚಿಂತಿಸುತ್ತಾ ಬಂದಿದ್ದಾರೆ, ಚಿಂತಿಸಿ ಗಭೀರವಾದ ತತ್ವಗಳನ್ನು ಆವಿಷ್ಕರಿಸುತ್ತಾ ಬಂದಿದ್ದಾರೆ. ಅವರೇ ಋಷಿಮುನಿಗಳು. ಈ ಋಷಿಮುನಿಗಳು ಗಡ್ಡ ಬಿಟ್ಟು ಜಡೆಕಟ್ಟಿದ ಕೇಶ ಉಳ್ಳವರಾಗಿದ್ದುದರ ಕಾರಣ ಅವರಿಗೆ ಇಹ ಜಗತ್ತಿನ ಏನೊಂದೂ ವಸ್ತುವಿನಲ್ಲಿ ಮೋಹವಿರಲಿಲ್ಲ. ಪುರಾತನ ಋಷಿಮುನಿಗಳ ಯಜ್ಞ ನಿಷ್ಕಾಮವಾದುದು. ಈ ಜಗತ್ತಿನಿಂದ ಆ ಋಷಿಮುನಿಗಳು ಏನನ್ನೂ ಬಯಸುತ್ತಿರಲಿಲ್ಲ—ಒಂದು ಹಿಡಿ ಅನ್ನ ಸಿಕ್ಕರೆ ಸಾಕು, ಶರೀರ ಪೋಷಣೆಯಾಯಿತು. ಈ ಶರೀರ ಪೋಷಣೆಯಾದಾಗ ಅವರು ಮನಸ್ಸಿನ ಮಹತ್ಕಾರ್ಯ ಸಾಧಿಸುತ್ತಿದ್ದರು. ದಿನರಾತ್ರಿಯೆನ್ನದೆ ಹೆಣಗಿ ಈ ಜಗತ್ತಿನ ಬಂಧನದಿಂದ ಬಿಡುಗಡೆ ಪಡೆಯುವ ವಿದ್ಯೆಯನ್ನು ತಾವೂ ಕಲಿತು ಜಗತ್ತಿಗೂ ಕಲಿಸಿದರು. ದುಃಖ ನಿವೃತ್ತಿಯ ಉಪಾಯಕ್ಕಿಂತ ಶ್ರೇಷ್ಠವಾದ ಕೊಡುಗೆ ಇದೆಯೇ?

ಅದಕ್ಕೆಂದೇ ಸಿನಿಮಾನಟನಟಿಯರಲ್ಲ, ಋಷಿಮುನಿಗಳು ಯುವ ಜನರ ಆದರ್ಶ ಎಂದು ಹಿರಿಯರು ಹೇಳಿದುದು. ಈ ಬೃಹದ್ ಯಜ್ಞದಲ್ಲಿ ನಾವೆಲ್ಲರೂ ಭಾಗಿಗಳು, ನಿಜ. ಆದರೆ ನಾವು ಸ್ವಾರ್ಥಿಗಳಂತೆ ಜಗತ್ತಿನಿಂದ ಎಷ್ಟು ಸಾಧ್ಯವೋ ಅಷ್ಟು ಸ್ವೀಕರಿಸುತ್ತಿದ್ದೇವೆ. ಕೊಡುತ್ತಿರುವುದೆಷ್ಟು? ಜಗತ್ತಿಗೆ ನಮ್ಮ ಕೊಡುಗೆಯೇನು? ಫ್ಯಾಷನ್ ಮಾಡುವುದೇ? ಡ್ರಗ್ಸ್ ಸೇವನೆಯೇ? ಚರಿತ್ರಹೀನತೆಯೆ? ಹಿಂದಿನ ಜನರು ಆವಿಷ್ಕರಿಸಿದ ಮಹಾನ್ ಸತ್ಯಗಳ ನಿಂದೆಯೇ? ಏನು ನಮ್ಮ ಕೊಡುಗೆ? ಯುವಜನರು ಈ ವಿಷಯದಲ್ಲಿ ಮನಸ್ಸಿಡಬೇಕು.

ನಾವೂ ಯಜ್ಞ ಮಾಡಲು ಕಲಿಯೋಣ. ಈ ಯಜ್ಞದ ಒಂದೇ ಒಂದು ಗುಟ್ಟನ್ನು ಮರೆಯಬಾರದು : ಈ ಯಜ್ಞದಲ್ಲಿ ಸ್ವೀಕರಿಸುತ್ತಿರುವಾಗ ಎಷ್ಟು ಆನಂದವೋ ನೀಡುವಾಗ ಅದಕ್ಕಿಂತ ಹೆಚ್ಚು ಆನಂದ. ಹೆಚ್ಚು ಉನ್ನತ ಮಟ್ಟದ ಕೊಡುಗೆ ಇದ್ದರೆ ಇನ್ನೂ ಉನ್ನತ ಮಟ್ಟದ ಆನಂದ. ಅತ್ಯಂತ ಉನ್ನತ ಮಟ್ಟದ ಆನಂದ ಸಿಗುವುದು ದುಃಖದಿಂದ ಬಿಡುಗಡೆ ಪಡೆಯುವ ಮಾರ್ಗವನ್ನು ಹುಡುಕಿ, ಬಿಡುಗಡೆ ಹೊಂದಿ, ಆ ಮಾರ್ಗದ ಬಗ್ಗೆ ಇತರರಿಗೆ ತಿಳಿಸಿದಾಗ. ಈ ದುಃಖದಿಂದ ಬಿಡುಗಡೆ ಪಡೆದೊಡನೆಯೇ ಸಿಗುತ್ತದೆ ಮಹದಾನಂದ. ಅದನ್ನು ಪಡೆಯಲೆಂದೇ ಈ ಎಲ್ಲ ಯಜ್ಞದ ಆಯೋಜನೆ. ಕೋಟಿ ಕೋಟಿ ವರ್ಷಗಳಿಂದ ನಡೆದಿರುವ ಈ ಆಯೋಜನೆಯ ಮೂಲ ಉದ್ದೇಶ ಜೀವಿಗಳು ಕಣ್ಣುತೆರೆದು ನಿಜವಾದ ಆನಂದ ಪಡೆಯಲಿ ಎಂದು. ಇದೇ ಜ್ಞಾನ. ಈ ಜ್ಞಾನ ಪಡೆದವರೇ ಜ್ಞಾನಿಗಳು; ಅವರೇ ಋಷಿಗಳು.

ಅವರಂತಾಗಬೇಕೆಂದರೆ ಅವರ ದೈಹಿಕ ಅಂದಚಂದ ಯುವಜನರದಾಗಬೇಕೆಂದಲ್ಲ; ಅವರ ಮನಸ್ಸಿನ ಮಹತ್ವಾಕಾಂಕ್ಷೆ, ಮಹಾನ್ ಆದರ್ಶಗಳು, ಜ್ಞಾನ—ಇವು ಯುವಜನರದಾಗಬೇಕು. ಆಗಲೇ ಯುವಜನರು ಮಹಾನ್ ಆಗುವುದು. ಕಂಪ್ಯೂಟರ್ ಯುಗವಿರಲಿ, *IT* ಯುಗವಿರಲಿ, ಆದರ್ಶ ಒಂದೇ—ದುಃಖದಿಂದ ಬಿಡುಗಡೆ ಹೊಂದುವುದು. ಈ ದುಃಖದಿಂದ ಬಿಡುಗಡೆ ಹೊಂದಬೇಕಾದರೆ ಮಾಡಬೇಕಾದುದೊಂದೇ—ಜ್ಞಾನಯಜ್ಞ.

ಯುವಜನರು ಯಜ್ಞ ಮಾಡುತ್ತಿದ್ದಾರೆ ಸರಿ. ಆದರೆ ಅದು ಅನ್ನಯಜ್ಞ, ನಿಜವಾದ ಜ್ಞಾನಯಜ್ಞ ಏನೆಂದು ತಿಳಿಯಲು ಹಿಂದಿರುಗಿ ನೋಡಲೇಬೇಕು. ಹಿರಿಯರ ಮಾತು ಕೇಳಲೇಬೇಕು. ✿

ನೀಡುವುದರಿಂದ ಆತ್ಮ-ಸಫಲತೆಯುಂಟಾಗುವುದೆಂಬ ಸತ್ಯವನ್ನು ನಾವು ಮರೆಯುತ್ತೇವೆ

—John C. Cornelius